## ಬಣ್ಣ ಬದಲಿಸುವ ಸೀರೆ!

ರಿಯಾಯಿತಿ ದರದಲ್ಲಿ ಸೇಲ್ಸ್ ಎಂಬ ಅಬ್ಬರದ ಪ್ರಚಾರದ ಫಲಕ ನೋಡಿ, ಜವಳಿ ಮಳಿಗೆ ಪ್ರವೇಶಿಸಿದ ಸಾವಿತ್ರಮ್ಮನವರು, ಅಲ್ಲಿನ ಸೇಲ್ಸ್‌ಗರ್ಲ್ ಒಬ್ಬಳನ್ನು ಕುರಿತು, ತನಗೆ ಹಸುರು ಬಣ್ಣದ ಸೀರೆಯನ್ನು ತೋರಿಸುವಂತೆ ಕೇಳಿದರು.

ಅಲ್ಲಿ ಇಲ್ಲಿ ಹುಡುಕಿ ಆ ಸೇಲ್ಸ್‌ಗರ್ಲ್ ಸೀರೆ ಒಂದನ್ನು ತೋರಿಸಿದಳು. ಅದು ಕೆಂಪು ಬಣ್ಣದ್ದಾಗಿತ್ತು! ಇದನ್ನು ಆಕ್ಷೇಪಿಸಿದ ಸಾವಿತ್ರಮ್ಮನವರು ಕೋಪದಿಂದ 'ರೀ... ನಾನು ಕೇಳಿದ್ದು ಹಸುರು ಬಣ್ಣದ ಸೀರೆ. ಆದರೆ ನೀವು ತೋರಿಸ್ತಾ ಇರೋದು ಕೆಂಪು ಬಣ್ಣದ ಸೀರೆ!' ಎಂದರು.

ಅದಕ್ಕೆ ಆ ಸೇಲ್ಸ್‌ಗರ್ಲ್ ಶಾಂತವದನಳಾಗಿ ತಾಳ್ಮೆಯಿಂದ 'ಮೇಡಂ ಈ ಕೆಂಪು ಸೀರೆಯನ್ನು ಒಮ್ಮೆ ನೀರಿಗೆ ಹಾಕಿ, ಅದು ಹಸುರು ಸೀರೆಯಾಗುತ್ತದೆ! ಮತ್ತೊಮ್ಮೆ ವಾಶ್ ಮಾಡಿದರೆ ಬಿಳಿ ಸೀರೆಯಾಗುತ್ತದೆ' ಎಂದಳು. ಬೆಸ್ತು ಬಿದ್ದು ಸುಸ್ತಾಗುವ ಸರದಿ ಸಾವಿತ್ರಮ್ಮನವರದಾಗಿತ್ತು.



**ಚಂದ್ರಕುಮಾರ್ ಡಿ.**

---

## ಕುಳಿತು ಸಾರು ಮಾಡಿದ್ರು!

ಪಕ್ಕದ ಮನೆಯ ನನ್ನ ಗೆಳತಿಗೆ ನನ್ನ ಐದು ವರ್ಷದ ಮೊಮ್ಮಗನ ಜೊತೆ ಮಾತನಾಡುವುದೇ ಒಂದು ಖುಷಿ. ಈ ಸಲ ರಜೆಗೆ ಅವನು ಇಲ್ಲಿ ಬಂದಾಗ ಒಂದು ಮಧ್ಯಾಹ್ನ ಮನೆಗೆ ಬಂದವರೇ 'ಏನೋ ಊಟ ಆಯ್ತಾ? ಅಜ್ಜಿ ಏನು ಸಾರು ಮಾಡಿದ್ರು?' ಎಂದು ಕೇಳಿದರು.



ಆಗ ಅವನು 'ಓ... ಆಗಲೇ ಆಯ್ತು. ಅಜ್ಜಿ 'ಕುಳಿತು' ಸಾರು ಮಾಡಿದ್ರು' ಎಂದಾಗ ಅವರು ಆಶ್ಚರ್ಯದಿಂದ, 'ಅಲ್ಲಾ. ಅಜ್ಜಿ ಕುಳಿತು ಸಾರು ಮಾಡಿದ್ರೆ, ಅನ್ನವನ್ನು ನಿಂತು ಮಾಡಿದ್ರಾ?' ಎಂದು ಕೇಳಿದರು. ಮೊಮ್ಮಗನಿಗೆ ಅವರ ಪ್ರಶ್ನೆ ಅರ್ಥವಾಗದೆ ನನ್ನ ಕಡೆ ನೋಡಿದಾಗ ಅವರಿಬ್ಬರ ಮಾತು ಕೇಳುತ್ತಿದ್ದ ನನಗೆ ಪರಿಸ್ಥಿತಿಯ ಅರ್ಥವಾಯಿತು.

ನಾನು ಕೂಡಲೇ 'ಹುರುಳಿಗೆ ನಮ್ಮ ಕೊಂಕಣಿಯಲ್ಲಿ 'ಕುಳಿತು' ಅಂತ ಹೇಳುತ್ತೇವೆ. ಆದಕ್ಕೆ ಅವನು ಹುರುಳಿಸಾರು ಅನ್ನೋದಕ್ಕೆ 'ಕುಳಿತು ಸಾರು' ಎಂದು ಕೊಂಕಣಿ ಸೇರಿಸಿ ತನ್ನದೇ ಕನ್ನಡದಲ್ಲಿ ಉತ್ತರಿಸಿದ್ದಾನೆ' ಎಂದಾಗ ಅವರಿಗೆ ಜೋರು ನಗು. ಪ್ರೀತಿಯಿಂದ ಅವನ ಗಲ್ಲ ಸವರಿ 'ಹೌದಾ, ಜಾಣ ನೀನು' ಎಂದು ಹೇಳಿನಕ್ಕರು.

**ಜಯಮಾಲಾ ಪೈ**